# ಸೈಬರ್ ದಾಳಿಗೆ ಡಿಫೆಂಡರ್ ತಡೆ

ಟೆಕ್ ದೈತ್ಯ ಕಂಪನಿ ಮೈಕ್ರೊಸಾಫ್ಟ್ – 'ಮೈಕ್ರೊಸಾಫ್ಟ್ ಡಿಫೆಂಡರ್ ಎಕ್ಸ್‌ಟರ್ನಲ್ ಅಟ್ಯಾಕ್ ಸರ್ಫೇಸ್ ಮ್ಯಾನೇಜ್ಮೆಂಟ್' ಸಾಫ್ಟ್‌ವೇರ್‌ನ ಹೊಸ ಆವೃತ್ತಿ ಪರಿಚಯಿಸಿದೆ. ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಈ ಆವೃತ್ತಿಯಿಂದ ಸಹಾಯದಿಂದ ಸೈಬರ್ ದಾಳಿಯನ್ನು ಸಮರ್ಥವಾಗಿ ತಡೆಯಬಹುದಾಗಿದೆ.

ಸೈಬರ್ ಕ್ರೈಮ್ ತಡೆಯುವಂತಹ ಪ್ರಬಲ ಸಾಫ್ಟ್‌ವೇರ್‌ಗೆ ಬೇಡಿಕೆ ಇರುವ ಸಂದರ್ಭದಲ್ಲಿ ಹಾಗೂ ಸೈಬರ್ ದಾಳಿಯಂತಹ ಪ್ರಕರಣಗಳು ಹೆಚ್ಚುತ್ತಿರುವಾಗ ಅಂತಹದ್ದೊಂದು ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವುದು ಮೈಕ್ರೊಸಾಫ್ಟ್‌ಗೆ ಅನಿವಾರ್ಯವಾಗಿತ್ತು. ಆ ನಿಟ್ಟಿನಲ್ಲಿ ರೂಪುಗೊಂಡ ಡಿಫೆಂಡರ್ ಸಾಫ್ಟ್‌ವೇರ್, ದೈತ್ಯ ಟೆಕ್ ಕಂಪನಿಗಳಿಗೆ ಹೆಚ್ಚು ಅನುಕೂಲಕರ. ಸಾಮಾನ್ಯರೂ ಇದನ್ನು ತಮ್ಮ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳಲ್ಲಿ ಬಳಸಬಹುದು. ಈ ಹಿಂದೆಯೇ ಅಭಿವೃದ್ಧಿಗೊಂಡಿದ್ದ ಡಿಫೆಂಡರ್ ಸಾಫ್ಟ್‌ವೇರ್‌ಗೆ ಮೈಕ್ರೊಸಾಫ್ಟ್ ಹೊಸ ಸ್ಪರ್ಶ ನೀಡಿ ಈಗ ಪರಿಚಯಿಸಿದೆ.

ಟೆಕ್ ಲೋಕ ಬೆಳೆದಂತೆಲ್ಲಾ ಹ್ಯಾಕರ್‌ಗಳ ಸಂಖ್ಯೆಯೂ ಹೆಚ್ಚುತ್ತಿದೆ. ಸೈಬರ್ ದಾಳಿ, ಹ್ಯಾಕಿಂಗ್ ಮಾಡುವುದೇ ದೊಡ್ಡ ಉದ್ಯಮವಾಗಿ ಬೆಳೆದುನಿಂತಿದೆ. ಹ್ಯಾಕರ್‌ಗಳು ಹೆಚ್ಚಾದಂತೆಲ್ಲ ದೊಡ್ಡ ದೊಡ್ಡ ಕಂಪನಿಗಳ ಮೇಲೆ ಸೈಬರ್ ದಾಳಿಯಾಗುವ ಭೀತಿಯೂ ಹೆಚ್ಚುತ್ತಿದೆ. ಸೈಬರ್ ದಾಳಿಯಾಗುತ್ತಿರುವ ಪ್ರಕರಣಗಳ ಸುದ್ದಿ ಜಗತ್ತಿನೆಲ್ಲೆಡೆಯಿಂದ ಆಗಾಗ ಕೇಳಿ ಬರುತ್ತಿರುತ್ತಿದೆ. ಇದಕ್ಕೆ ಪುಷ್ಟಿನೀಡುವಂತಿದೆ 2020ರಲ್ಲಿ ಸೈಬರ್ ಸೆಕ್ಯೂರಿಟಿ ವೆಂಚರ್ಸ್ ನಡೆಸಿದ ಸಂಶೋಧನೆ.



**ಸೈಬರ್ ದಾಳಿಯಂತಹ ಆಘಾತಕಾರಿ ಬೆಳವಣಿಗೆಗೆ ಪ್ರಬಲ ಪ್ರತಿರೋಧವೊಡ್ಡುವ 'ಡಿಫೆಂಡರ್' ಸಾಫ್ಟ್‌ವೇರ್‌ನ ಹೊಸ ಆವೃತ್ತಿಯನ್ನು ಮೈಕ್ರೊಸಾಫ್ಟ್ ಹೊರತಂದಿದೆ.**

**■ ಶಶಿಕುಮಾರ್ ಸಿ.**

ಈ ಸಂಶೋಧನೆಯ ಪ್ರಕಾರ, 2025ರ ವೇಳೆಗೆ ಸೈಬರ್ ದಾಳಿಯು ತೀವ್ರಗತಿಯಲ್ಲಿ ಹೆಚ್ಚಾಗಲಿದೆ. ಚೆಕ್ ಪಾಯಿಂಟ್ ಸಾಫ್ಟ್‌ವೇರ್ ಟೆಕ್ನಾಲಜಿ ಎಂಬ ಮತ್ತೊಂದು ಸಂಸ್ಥೆಯು ನಡೆಸಿದ ವರದಿಯ ಪ್ರಕಾರ, 2020ರಿಂದ 2022ರ ಅವಧಿಯಲ್ಲಿ ಕಾರ್ಪೊರೇಟ್ ಕಂಪನಿಗಳ ಮೇಲೆ ಪ್ರತಿ ವಾರ ಶೇ. 50ರಷ್ಟು ಸೈಬರ್ ದಾಳಿಯ ಹೆಚ್ಚಾಗುತ್ತಿದೆ.

'ಟೆಕ್ ಲೋಕಕ್ಕೆ ಭೂತದಂತೆ ಕಾಡುತ್ತಿರುವ ಈ ಸಮಸ್ಯೆ ಪರಿಹಾರಕ್ಕೆ ಮೈಕ್ರೊಸಾಫ್ಟ್ ಸಂಸ್ಥೆ ನೂತನ ಪ್ರಯೋಗ ಮಾಡಿದೆ. ಅತ್ಯಾಧುನಿಕ ತಂತ್ರಜ್ಞಾನ ಆಧರಿತ ಮೈಕ್ರೊಸಾಫ್ಟ್ ಡಿಫೆಂಡರ್ ಎಕ್ಸ್‌ಟರ್ನಲ್ ಅಟ್ಯಾಕ್ ಸರ್ಫೇಸ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಸಹಾಯದಿಂದ ಸೈಬರ್ ದಾಳಿ ತಡೆಯಬಹುದು' ಎಂದು ಸಂಸ್ಥೆ ತಿಳಿಸಿದೆ.



## ಕಾರ್ಯನಿರ್ವಹಣೆ ಹೇಗೆ?

ಯಾವುದೇ ಕಂಪನಿಯು ಈ ಸಾಫ್ಟ್‌ವೇರ್ ಅನ್ನು ಅಳವಡಿಸಿಕೊಂಡಲ್ಲಿ ಸಂಪೂರ್ಣ ಸುರಕ್ಷತೆಯ ಜೊತೆಗೆ ಇಂಟರ್ನೆಟ್ ಸಂಪರ್ಕಗಳನ್ನು ನಿರಂತರವಾಗಿ ಪರಿಶೀಲಿಸುವ ಹೊಣೆಯನ್ನು ಹೊತ್ತುಕೊಳ್ಳಲಿದೆ. ಕಂಪನಿಗಳ ಎಲ್ಲ ಡಿಜಿಟಲ್ ದಾಖಲೆಗಳಿಗೆ ಸುರಕ್ಷತೆ ವಹಿಸುವುದರ ಜೊತೆಗೆ, ಕಂಪನಿಯ ಗ್ರಾಹಕರ ದಾಖಲೆಗಳು ಮತ್ತು ವಹಿವಾಟಿನ ಸಂಪೂರ್ಣ ವಿವರದ ಮೇಲೂ ನಿಗಾವಹಿಸುತ್ತದೆ ಎಂದು ಕಂಪನಿಯು ತಿಳಿಸಿದೆ.

ಮೈಕ್ರೊಸಾಫ್ಟ್ ಸಂಸ್ಥೆಯ ಸೆಕ್ಯೂರಿಟಿ ವಿಭಾಗದ ನಿರ್ದೇಶಕರಾದ ವಾಸು ಜಕ್ಕಲ್, 'ಕಂಪನಿಗಳ ಸಾಫ್ಟ್‌ವೇರ್‌ಗಳ ಮೇಲೆ ಸೈಬರ್ ದಾಳಿ ಆಗುವುದನ್ನು ಗುರುತಿಸುವುದರ ಜೊತೆಗೆ ಆ ಬಗ್ಗೆ ಶೀಘ್ರವಾಗಿ ಸಂಬಂಧಿತ ಸಿಬ್ಬಂದಿಗೆ ಎಚ್ಚರಿಕೆಯನ್ನು ನೀಡುತ್ತದೆ. ಅಂತೆಯೇ ಆ ಕಂಪನಿಯ ಗ್ರಾಹಕರಿಗೂ ಎಚ್ಚರಿಕೆಯ ಸಂದೇಶ ರವಾನೆಯಾಗುತ್ತದೆ' ಎಂದು ಮೈಕ್ರೊಸಾಫ್ಟ್‌ನ ಅಧಿಕೃತ ಬ್ಲಾಗ್‌ನಲ್ಲಿ ತಿಳಿಸಿದ್ದಾರೆ.

ಈ ಸಾಫ್ಟ್‌ವೇರ್ ಮೂಲಕ ಕಂಪನಿಗಳು ತಮ್ಮ ಗ್ರಾಹಕರಿಗೆ ಸೈಬರ್ ಭದ್ರತೆ ನೀಡುವುದರ ಜೊತೆಗೆ ಗ್ರಾಹಕರ ಎಲ್ಲ ಡೇಟಾ ಪರಿಶೀಲನೆಗೆ ಭದ್ರತಾ ಸಹಾಯದೊಂದಿಗೆ ಪ್ರವೇಶಿಸುವ ಅವಕಾಶವನ್ನು ಕಲ್ಪಿಸುತ್ತವೆ. ಆ ಮೂಲಕ ಗ್ರಾಹಕರು ಟೆಕ್ ಕಂಪನಿಗಳಲ್ಲಿನ ತಮ್ಮ ವೈಯಕ್ತಿಕ ಡಾಟಾದ ಬಗ್ಗೆ ನಿಗಾವಹಿಸಬಹುದು. ಕಂಪನಿಯ ವಾತಾವರಣದಲ್ಲೇ ರಹಸ್ಯವಾಗಿ ಅಡಗಿ ದಾಳಿಗೆ ಹೊಂಚುಹಾಕುವುದನ್ನೂ ಪತ್ತೆಹಚ್ಚಿ, ಅದನ್ನು ನಿರ್ಬಂಧಿಸಬಹುದು.

## ಡಿಫೆಂಡರ್ ಥ್ರೆಟ್ ಇಂಟೆಲಿಜೆನ್ಸ್

'ಡಿಫೆಂಡರ್ ಥ್ರೆಟ್ ಇಂಟಲಿಜೆನ್ಸ್' ಅನ್ನುವ ಮತ್ತೊಂದು ಸಾಫ್ಟ್‌ವೇರ್ ಅನ್ನೂ ಮೈಕ್ರೊಸಾಫ್ಟ್ ಪರಿಚಯಿಸಿದೆ. ಇದು ಭದ್ರತಾ ಕಾರ್ಯಚರಣೆ ನಡೆಸುವ ತಂಡಗಳಿಗೆ ಅಗತ್ಯವಿರುವ ಗುಪ್ತಚರ ವಿವರವನ್ನು ಒದಗಿಸುತ್ತದೆ. ಒಂದು ವೇಳೆ ಸೈಬರ್ ದಾಳಿಗೆ ತುತ್ತಾದ ನಂತರವೂ ಆ ಬಗ್ಗೆ ಸ್ವತಂತ್ರ ಪ್ರಾರಂಭಿಕ ತನಿಖೆಯನ್ನೂ ಇದು ಮಾಡುತ್ತದೆ. ■